# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:22/09/2008 ನಡವಳಿಗಳು**

**ವಿಷಯದ ಸಂಖ್ಯೆ:515/2008-09**

ವಿಧಾನ ಸೌಧದ ಸುತ್ತ ಹಾಗೂ ಹತ್ತಿರದಲ್ಲಿ ಪಾದಚಾರಿ ಸುರಂಗ ಮಾರ್ಗ ನಿರ್ಮಿಸಲು 3.0X3.0X1.0 m ಅಳತೆಯ ಆರ್.ಸಿ.ಸಿ ಪ್ರಿಕ್ಯಾಸ್ಟ್ ಬಾಕ್ಸ್‌ಗಳನ್ನು ಸರಬರಾಜು ಮಾಡುವ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ವಿಧಾನ ಸೌಧದ ಹತ್ತಿರ ಪಾದಚಾರಿಗಳು ರಸ್ತೆಗಳನ್ನು ದಾಟಲು ಸುರಂಗ ಮಾರ್ಗ ನಿರ್ಮಿಸಲು ಪ್ರಿಕ್ಯಾಸ್ಟ್ ಆರ್.ಸಿ.ಸಿ ಬಾಕ್ಸ್‌ಗಳ ತಾಂತ್ರಿಕತೆಯನ್ನು ಅಳವಡಿಸಿಕೊಂಡು 3.0X3.0X1.0 m ಅಳತೆಯ ಆರ್.ಸಿ.ಸಿ ಬಾಕ್ಸ್‌ಗಳನ್ನು ಸರಬರಾಜು ಮಾಡಲು ಉದ್ದೇಶಿಸಿದ್ದು, ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ರೂ.94.00 ಲಕ್ಷಗಳಿಗೆ ತಯಾರಿಸಿದ್ದು, ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಡಳಿತಗಾರರು ದಿನಾಂಕ:24-07-2008 ರಂದು ವಿಷಯದ ಸಂಖ್ಯೆ:356/2007-08 ರಲ್ಲಿ ನೀಡಿದ್ದು, ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ದಿನಾಂಕ:18-07-2008 ರಂದು ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿ, ಅದೇ ದಿನವಂದು ಟೆಂಡರ್ ಅನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಮೆ: ಮಾರುತಿ ಕನ್ಸ್‌ಟ್ರಕ್ಷನ್ಸ್ ಮತ್ತು ಮೆ: ಪರಿಚಿತ ಕನ್ಸ್‌ಟ್ರಕ್ಷನ್ಸ್, ಗುತ್ತಿಗೆದಾರ ಸಂಸ್ಥೆಗಳು ಭಾಗವಹಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ ಎರಡು ಸಂಸ್ಥೆಗಳೂ ಅರ್ಹರಾಗಿದ್ದು, ಸದರಿಯವರುಗಳ ಆರ್ಥಿಕ ಬಿಡ್‌ಗಳನ್ನು ತೆರೆದು ತುಲಾನಾತ್ಮಕ ಪಟ್ಟಿಯನ್ನು ತಯಾರಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ;

1. ಮೆ: ಮಾರುತಿ ಕನ್ಸ್‌ಟ್ರಕ್ಷನ್ಸ್ ರವರು ಒಟ್ಟು ರೂ.1,23,12,000.00 ಗಳನ್ನು ನಮೂದಿಸಿದ್ದು, ಇದನ್ನು ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.31.54% ರಷ್ಟು ಹಾಗೂ 08-09ನೇ ಸಾಲಿನ 2ನೇ ತ್ರೈಮಾಸಿಕ ಸಿಮೆಂಟ್, ಉಕ್ಕು ದರಗಳಿಗೆ ಹೋಲಿಸಿದಾಗ ಶೇ.28.45% ರಷ್ಟು ಹೆಚ್ಚಾಗಿರುತ್ತದೆ.
2. ಮೆ: ಪರಿಚಿತ ಕನ್ಸ್‌ಟ್ರಕ್ಷನ್ಸ್ ರವರು ಒಟ್ಟು ರೂ.1,15,92,000.00 ಗಳನ್ನು ನಮೂದಿಸಿದ್ದು, ಇದನ್ನು ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.23.85% ರಷ್ಟು ಹಾಗೂ 08-09ನೇ ಸಾಲಿನ 2ನೇ ತ್ರೈಮಾಸಿಕ ಸಿಮೆಂಟ್, ಉಕ್ಕು ದರಗಳಿಗೆ ಹೋಲಿಸಿದಾಗ ಶೇ.20.94% ರಷ್ಟು ಹೆಚ್ಚಾಗಿರುತ್ತದೆ.

ಮೆ: ಪರಿಚಿತ ಕನ್ಸ್‌ಟ್ರಕ್ಷನ್ಸ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರ ಸಂಸ್ಥೆಯಾಗಿದ್ದು, ಸದರಿಯವರು ನಮೂದಿಸಿರುವ ದರವನ್ನು ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.23.85% ರಷ್ಟು ಹಾಗೂ 2008-09ನೇ ಸಾಲಿನ 2ನೇ ತ್ರೈಮಾಸಿಕ ಸಿಮೆಂಟ್, ಉಕ್ಕು ದರಸೂಚಿಗೆ ಹೋಲಿಸಿದಲ್ಲಿ ಶೇ.20.94% ರಷ್ಟು ಹೆಚ್ಚಾಗಿದ್ದು, ಇದರನ್ವಯ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ತಾವು ನಮೂದಿಸಿರುವ ದರಗಳು ಸ್ಪರ್ಧಾತ್ಮಕ ದರಗಳೆಂದು ತಿಳಿಸುತ್ತಾ, ಕಾಮಗಾರಿಯನ್ನು ಅಂದಾಜು ಪಟ್ಟಿಯ ದರಗಳ ಮೇಲೆ ನಮೂದಿಸಿರುವ ಹೆಚ್ಚುವರಿಗೆ ಹಾಗೂ 2008-09ನೇ ಸಾಲಿನ 2ನೇ ತ್ರೈಮಾಸಿಕ ಸಿಮೆಂಟ್, ಉಕ್ಕು ದರಗಳ ಶೇ.20.94% ರಷ್ಟು ಹೆಚ್ಚುವರಿಗೆ ನಿರ್ವಹಿಸಲು ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಕನಿಷ್ಠ ಗುತ್ತಿಗೆದಾರರಾದ ಮೆ: ಪರಿಚಿತ ಕನ್ಸ್‌ಟ್ರಕ್ಷನ್ಸ್ ರವರ ಗುತ್ತಿಗೆಯ ಮೊತ್ತ ರೂ.1,15,92,000/- ಗಳಾಗಿದ್ದು, ಇದನ್ನು ಅಂದಾಜು ಪಟ್ಟಿಯ ದರಗಳಂತೆ ಟೆಂಡರ್‌ಗಿಟ್ಟ ಮೊತ್ತ ರೂ.93,60,000/- ಗಳಿಗೆ ಹೋಲಿಸಿದಾಗ ಶೇ.23.85% ರಷ್ಟು ಹಾಗೂ 2008-09ನೇ ಸಾಲಿನ 2ನೇ ತ್ರೈಮಾಸಿಕ ಸಿಮೆಂಟ್, ಉಕ್ಕು ದರಗಳ ಹಾಗೂ ಡೇಟಾ ರೇಟ್‌ನ ಮೊತ್ತ ರೂ.95,84,640.00 ಗಳಿಗೆ ಹೋಲಿಸಿದಾಗ ಸರಾಸರಿ ಶೇ.20.94% ರಷ್ಟು ಹೆಚ್ಚಿರುವ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:19-09-2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:19-09-2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್‌ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ: 22/09/2008 ರ ನಡವಳಿಗಳು**

**ವಿಷಯದ ಸಂಖ್ಯೆ:516/2008–09**

ಬಳ್ಳಾರಿ ರಸ್ತೆಯ ಸಿ.ಬಿ.ಐ ಜಂಕ್ಷನ್‌ನಲ್ಲಿ ಹೊಸದಾಗಿ ನಿರ್ಮಿಸಿರುವ ಸುರಂಗ ಮಾರ್ಗದ ರಸ್ತೆಗೆ ಡಾಂಬರೀಕರಣ ಮಾಡುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬಳ್ಳಾರಿ ರಸ್ತೆಯ ಸಿ.ಬಿ.ಐ ಜಂಕ್ಷನ್‌ನಲ್ಲಿ ಹೊಸದಾಗಿ ನಿರ್ಮಿಸಿರುವ ಸುರಂಗ ಮಾರ್ಗದ ರಸ್ತೆಗೆ ಡಾಂಬರೀಕರಣ ಮಾಡುವ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ರೂ.49.95 ಲಕ್ಷಗಳಿಗೆ ತಯಾರಿಸಿದ್ದು, ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಡಳಿತಗಾರರು ದಿನಾಂಕ:12–10–2007 ರಂದು ವಿಷಯದ ಸಂಖ್ಯೆ:66/2007–08 ರಲ್ಲಿ ನೀಡಿದ್ದು, ಈಗಾಗಲೇ ಮೊದಲನೇ ಕರೆಯಲ್ಲಿ ಕರೆಯಲಾಗಿದ್ದ ಟೆಂಡರ್ ಅನ್ನು ವಿಶೇಷ ಆಯುಕ್ತರ ಅನುಮೋದನೆಯೊಂದಿಗೆ ರದ್ದುಪಡಿಸಿದ್ದು, ರೂ.49.82 ಲಕ್ಷಗಳಿಗೆ ಎರಡು ಲಕೋಟೆ ಪದ್ಧತಿಯಲ್ಲಿ 2ನೇ ಬಾರಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ದಿನಾಂಕ:14–07–2008 ರಂದು ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿ, ಅದೇ ದಿವಸದಂದು ಟೆಂಡರ್ ಅನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರುಗಳು ನಮೂದಿಸಿರುವ ದರಗಳು ಕೆಳಕಂಡಂತಿವೆ:

1. ಮೆ: ನಾರಯಣ ಕನ್‌ಸ್ಟ್ರಕ್ಷನ್ಸ್ ರವರು ಒಟ್ಟು ರೂ.94,09,675.00 ಗಳನ್ನು ನಮೂದಿಸಿದ್ದು, ಇದನ್ನು 07–08ನೇ ಸಾಲಿನ ದರಪಟ್ಟಿ ಹಾಗೂ 08–09ನೇ ಸಾಲಿನ 2ನೇ ತ್ರೈಮಾಸಿಕ ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.60.59% ರಷ್ಟು ಹೆಚ್ಚಾಗಿರುತ್ತದೆ.
2. ಶ್ರೀ ಎಸ್.ಆರ್.ಗಣೇಶ ರವರು ಒಟ್ಟು ರೂ.1,02,12,725.00 ಗಳನ್ನು ನಮೂದಿಸಿದ್ದು, ಇದನ್ನು 07–08ನೇ ಸಾಲಿನ ದರಪಟ್ಟಿ ಹಾಗೂ 08–09ನೇ ಸಾಲಿನ 2ನೇ ತ್ರೈಮಾಸಿಕ ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.83.83% ರಷ್ಟು ಹೆಚ್ಚಾಗಿರುತ್ತದೆ.

ಮೆ: ನಾರಯಣ ಕನ್‌ಸ್ಟ್ರಕ್ಷನ್ಸ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರ ಸಂಸ್ಥೆಯಾಗಿದ್ದು, ಸದರಿಯವರು ನಮೂದಿಸಿರುವ ದರವನ್ನು 2007–08ನೇ ಸಾಲಿನ ದರಪಟ್ಟಿ ಹಾಗೂ 2008–09ನೇ ಸಾಲಿನ 2ನೇ ತ್ರೈಮಾಸಿಕ ಬಿಟುಮಿನ್ ದರಸೂಚಿಗೆ ಹೋಲಿಸಿದಲ್ಲಿ ಶೇ.60.59% ರಷ್ಟು ಹೆಚ್ಚಾಗಿದ್ದು, ಇದರನ್ವಯ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ತಾವು ನಮೂದಿಸಿರುವ ದರಗಳು ಸ್ಪರ್ಧಾತ್ಮಕ ದರಗಳೆಂದು ತಿಳಿಸುತ್ತಾ, ಕಾಮಗಾರಿಯನ್ನು 2007–08ನೇ ಸಾಲಿನ ದರಪಟ್ಟಿ ಹಾಗೂ 2008–09ನೇ ಸಾಲಿನ 2ನೇ ತ್ರೈಮಾಸಿಕ ಬಿಟುಮಿನ್ ದರಗಳ ಮೇಲೆ ಶೇ.20.59% ರಷ್ಟು ಹೆಚ್ಚುವರಿಗೆ ನಿರ್ವಹಿಸಲು ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಕನಿಷ್ಠ ಗುತ್ತಿಗೆದಾರರಾದ ಮೆ: ನಾರಯಣ ಕನ್‌ಸ್ಟ್ರಕ್ಷನ್ಸ್ ರವರ ಗುತ್ತಿಗೆಯ ಮೊತ್ತ ರೂ.70,65,686/– ಗಳಾಗಿದ್ದು, 2008–09ನೇ ಸಾಲಿನ 2ನೇ ತ್ರೈಮಾಸಿಕ ಬಿಟುಮಿನ್ ದರಗಳಂತೆ ಟೆಂಡರ್‌ಗಿಟ್ಟ ಮೊತ್ತ ರೂ.48,24,655.65 ಗಳಿಗೆ ಹೋಲಿಸಿದಾಗ ಶೇ.20.59% ರಷ್ಟು ಹೆಚ್ಚಿರುವ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11–09–2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11–09–2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ: 22/9/2008 ರ ನಡವಳಿಗಳು**

**ವಿಷಯದ ಸಂಖ್ಯೆ:517/2008–09**

ಶೇಷಾದ್ರಿಪುರಂನ ಲಿಂಕ್ ರಸ್ತೆಯ ಅಗಲೀಕರಣ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಶೇಷಾದ್ರಿಪುರಂನ ಲಿಂಕ್ ರಸ್ತೆಯನ್ನು ಗೀತಾಂಜಲಿ ಥಿಯೇಟರ್‌ನಿಂದ 1ನೇ ಮುಖ್ಯರಸ್ತೆ ಶೇಷಾದ್ರಿಪುರಂ ವರೆಗೆ 24.00 ಮೀಟರ್ ಅಗಲಕ್ಕೆ ರಸ್ತೆ ಅಗಲೀಕರಣಗೊಳಿಸಲು ಯೋಜಿಸಲಾಗಿದ್ದು, ಸದರಿ ಕಾಮಗಾರಿಯನ್ನು ಟಿ.ಡಿ.ಆರ್ ನಿಯಮದಡಿಯಲ್ಲಿ ತೆಗೆದುಕೊಳ್ಳಬೇಕಾಗಿದ್ದು, ಈಗಾಗಲೇ ಈ ರಸ್ತೆ ಅಗಲೀಕರಣದ ವ್ಯಾಪ್ತಿಯಲ್ಲಿ ಬರುವ ಆಸ್ತಿಯ ಮಾಲೀಕರುಗಳಿಗೆ ಟಿ.ಡಿ.ಆರ್ ಫಾರಂ ಅನ್ನು ವಿತರಿಸಲಾಗಿದ್ದು, ಈವರೆಗೆ ಯಾವುದೇ ಮಾಲೀಕರಿಂದ ಟಿ.ಡಿ.ಆರ್ ಕೋರಿ ಅರ್ಜಿ ವಾಪಸ್ಸು ಬಂದಿರುವುದಿಲ್ಲ.

ಈ ರಸ್ತೆಯು ಒಟ್ಟು 0.634 ಕಿ.ಮೀ ಉದ್ದವಿದ್ದು, 24.00 ಮೀ ವರೆಗೆ ರಸ್ತೆಯನ್ನು ಅಗಲೀಕರಣಗೊಳಿಸಲು ಉದ್ದೇಶಿಸಲಾಗಿದೆ. ಈ ರಸ್ತೆಯ ಸರಪಳಿ 345 ಮೀ. ನಲ್ಲಿ ಒಂದು ಬೃಹತ್ ಮೋರಿಯ ಹಾದು ಹೋಗಿರುತ್ತದೆ. ಈ ಜಾಗದಲ್ಲಿ ಹೊಸದಾಗಿ ಸೇತುವೆಯನ್ನು ನವೀಕರಣಗೊಳಿಸಲು ಉದ್ದೇಶಿಸಿ ಅಳವಡಿಸಕೊಂಡಿದ್ದು, ಈ ರಸ್ತೆಯ ಅಗಲೀಕರಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬರುವ ವಿವಿಧ ಕಾಮಗಾರಿಗಳಿಗೆ ವಿವರವಾದ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ 2007–08 ರ ದರಪಟ್ಟಿಯಂತೆ ಹಾಗೂ ರಾಷ್ಟ್ರೀಯ ಹೆದ್ದಾರಿಯ ದರಪಟ್ಟಿ 2007–08ನೇ ಸಾಲಿನಂತೆ ತಯಾರಿಸಿಲಾಗಿರುತ್ತದೆ ಹಾಗೂ ಸಿಮೆಂಟ್, ಉಕ್ಕು ಮತ್ತು ಡಾಂಬರ್ ಕಾಮಗಾರಿಗಳಿಗೆ ಹೆಚ್ಚುವರಿಯಾಗಿರುವ ದರವನ್ನು ಲೋಕೋಪಯೋಗಿ ಇಲಾಖೆ ಸುತ್ತೋಲೆ:2008–09/174, ದಿನಾಂಕ:17–04–2008 ರಂತೆ ಅಳವಡಿಸಿಕೊಳ್ಳಲಾಗಿರುತ್ತದೆ. ಈ ರಸ್ತೆ ಅಗಲೀಕರಣದ ಕಾಮಗಾರಿಗೆ ತಗಲುವ ಒಟ್ಟು ಮೊತ್ತ ರೂ.4,32,78,254/– ಗಳೆಂದು ಅಂದಾಜಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.4,32,78,254/– ಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17–09–2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:17–09–2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:೩೩-೯-೦೮ ನಡವಳಿಗಳು**

**ವಿಷಯದ ಸಂಖ್ಯೆ: 518 /2008–09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆವರಣದಲ್ಲಿ ಬೃಹತ್ ರಸ್ತೆಗಳ ವಲಯ ಕಛೇರಿಯ ಒಂದು ಮತ್ತು ಎರಡನೇ ಮಹಡಿ ನಿರ್ಮಾಣ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ರಸ್ತೆಗಳ ವಲಯ ಕಛೇರಿಯ ಕೆಲಸ ಕಾರ್ಯಗಳ ಕೌನ್ಸಿಲ್ ಕಾರ್ಯಾಲಯದ ಕಟ್ಟಡದಲ್ಲಿ ನಿರ್ವಹಿಸುತ್ತಿದ್ದ ಸಂಧರ್ಭದಲ್ಲಿ ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು ಪಾಲಿಕೆ ಸದಸ್ಯರ ಚುನಾವಣೆಯ ನಂತರ ಕೌನ್ಸಿಲ್ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಕಛೇರಿಗಳನ್ನು ತೆರವು ಮಾಡುವ ಸಂಧರ್ಭ ಬಂದಾಗ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕಛೇರಿ ಕೆಲಸ ನಿರ್ವಹಿಸಲು ಕಟ್ಟಡದ ಕೊರತೆ ಉದ್ಭವಿಸುತ್ತದೆ. ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಯ ಆವರಣದಲ್ಲಿ ದಕ್ಷಿಣ ಭಾಗದ ಕಡೆ ಕಛೇರಿ ನಿರ್ಮಾಣ ಮಾಡಲು 2007–08ನೇ ಸಾಲಿನಲ್ಲಿ ರೂ..100.00 ಲಕ್ಷಗಳಿಗೆ ವಾಹನ ನಿಲುಗಡೆ ಸ್ಟಿಲ್ಟ್ ಮತ್ತು ನೆಲ ಮಹಡಿ ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ಮಾನ್ಯ ಆಯುಕ್ತರಿಗೆ ಸಲ್ಲಿಸಿ, ಆಯುಕ್ತರವರಿಂದ ಹಾಗೂ ಆಡಳಿತಗಾರರವರಿಂದ ಅನುಮೋದನೆ ಪಡೆದುಕೊಂಡು ಟೆಂಡರ್ ಮೂಲಕ ಕಾಮಗಾರಿಗೆ ಈಗಾಗಲೇ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈಗಾಗಲೇ ಮಂಜೂರಾಗಿ ಕಾರ್ಯ ನಿರ್ವಹಿಸುತ್ತಿರುವ ನೆಲ ಮಹಡಿ ಕಟ್ಟಡದಲ್ಲಿ ಕಛೇರಿ ಕೆಲಸಗಳಿಗೆ ಸ್ಥಳಾವಕಾಶ ಹೆಚ್ಚು ದೊರೆಯದ ಕಾರಣ 2008–09ನೇ ಸಾಲಿನಲ್ಲಿಯೂ ಸಹ ಹಾಲಿ ನಿರ್ಮಾಣವಾಗುತ್ತಿರುವ ಜೊತೆಯಲ್ಲಿ ಟೆಂಡರ್ ಮೂಲಕ 1ನೇ ಮಹಡಿ ಮತ್ತು 2ನೇ ಮಹಡಿ ಕಟ್ಟಡವನ್ನು ನಿರ್ಮಾಣ ಮಾಡಲು ಯೋಜನೆ ರೂಪಿಸಲು ಅಭಿಯಂತರರುಗಳ ಸಭೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಸಲಹೆಯಂತೆ ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು ನೀಡಿರುವ ಸೂಚನೆಯ ಪ್ರಕಾರ 2008–09ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ರೂ.100.00 ಲಕ್ಷಗಳಿಗೆ ಅನುವು ಮಾಡಲಾಗಿದೆ. ಅದರಂತೆ, ಸದರಿ ಕಾಮಗಾರಿಗೆ 2008–09ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರ ಪಟ್ಟಿಯಂತೆ ರೂ.100.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಮತ್ತು ಪೂರ್ಣ ಯೋಜನಾ ವರದಿ (ಡಿ.ಪಿ.ಆರ್) ಅನ್ನು ಸಮಾಲೋಚಕರಿಂದ ತಯಾರಿಸಲಾಗಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆವರಣದಲ್ಲಿ ಬೃಹತ್ ರಸ್ತೆಗಳ ವಲಯ ಕಛೇರಿಯ 1ನೇ ಮಹಡಿ ಮತ್ತು ಎರಡನೇ ಮಹಡಿ ನಿರ್ಮಾಣ ಕಾಮಗಾರಿಯ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16–09–2008 ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:16–09–2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 23/09/2008ರ**

**ನಡವಳಿಗಳು**

ವಿಷಯ ಸಂಖ್ಯೆ: 519/2008–09

ಬಳ್ಳಾರಿ ರಸ್ತೆಗೆ ಹೊಂದಿಕೊಂಡಿರುವ ವೆಟರ್ನರಿ ಕಾಲೇಜಿಗೆ ಅಲಂಕಾರಿಕ ವಿದ್ಯುತ್ ದೀಪಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ ನಿರ್ವಹಿಸುವ ಬಗ್ಗೆ.

ಪ್ರಸ್ತಾವನೆ:

ಬಳ್ಳಾರಿ ರಸ್ತೆಯ ಅಗಲೀಕರಣ ಕಾಮಗಾರಿ ಹಾಗೂ ಸಿ.ಬಿ.ಐ ಜಂಕ್ಷನ್‌ನಲ್ಲಿ ಮೇಲು ಸೇತುವೆಯನ್ನು ನಿರ್ಮಿಸಲು ಜಿ.ಕೆ.ವಿ.ಕೆ.ಕ್ಯಾಂಪಸ್‌ನಲ್ಲಿ, ವೆಟರ್ನರಿ ಕಾಲೇಜಿನ ಮುಂಭಾಗದಲ್ಲಿ 30ಮಿ. ಅಗಲಕ್ಕೆ ಮತ್ತು 500ಮಿ. ಉದ್ದಕ್ಕೆ ಜಾಗವನ್ನು ತೆಗೆದುಕೊಳ್ಳಲಾಗಿರುತ್ತದೆ. ಅದರಂತೆ ಜಿ.ಕೆ.ವಿ.ಕೆಯ ಅಧಿಕಾರಿಗಳು ಹಲವಾರು ಬೇಡಿಕೆಗಳನ್ನು ಕೋರಿರುತ್ತಾರೆ. ಅದರಂತೆ ಅಲಂಕಾರಿಕ ದೀಪಗಳನ್ನು ಅಳವಡಿಸುವಂತೆ ಉದ್ದೇಶಿಸಿದ್ದು, ವೆಟರ್ನರಿ ಕಾಲೇಜಿನ ಮುಂದೆ ಅಲಂಕಾರಿಕ ವಿದ್ಯುತ್ ದೀಪಗಳನ್ನು ರೂ.4.42ಲಕ್ಷಗಳಿಗೆ ಉಪ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಸದರಿ ಕಾಮಗಾರಿಯ ವೆಚ್ಚವನ್ನು Supplying & Manufacturing RCC Precast box segments for underpass at CBI junction ಗಾಗಿ ಅನುಮೋದಿತಗೊಂಡಿರುವ ರೂ.60.00 ಲಕ್ಷಗಳ ಮೂಲ ಅಂದಾಜು ಪಟ್ಟಿಯ ಉಳಿತಾಯದಲ್ಲಿ ಭರಿಸಲು ಉದ್ದೇಶಿಸಲಾಗಿರುತ್ತದೆ ಹಾಗೂ ಮೂಲ ಕಾಮಗಾರಿ ಸಂಕೇತವನ್ನು ಸದರಿ ಕಾಮಗಾರಿಯ ಉಪ ಅಂದಾಜು ಪಟ್ಟಿಗೆ ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗುವುದು.

ಸದರಿ ಕಾಮಗಾರಿಯನ್ನು ಉಪ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ 2007–08ನೇ ಸಾಲಿನ ಮತ್ತು ವಿದ್ಯುತ್ ದರಪಟ್ಟಿಯಂತೆ ತಯಾರಿಸಿ ಅನುಮೋದನೆಗಾಗಿ ಕೋರಲಾಗಿದೆ ಹಾಗೂ M/s Bangalore Bright Electricals ರವರಿಂದ ಸದರಿ ಕಾಮಗಾರಿಯನ್ನು ನಿರ್ವಹಿಸಲು ಉದ್ದೇಶಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬಳ್ಳಾರಿ ರಸ್ತೆಗೆ ಹೊಂದಿಕೊಂಡಿರುವ ವೆಟರ್ನರಿ ಕಾಲೇಜಿನ ಅಲಂಕಾರಿಕ ವಿದ್ಯುತ್ ದೀಪಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ M/s Bangalore Bright Electricals ರವರಿಂದ ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/09/2008ರ ನಡವಳಿಗಳು**

ವಿಷಯದ ಸಂಖ್ಯೆ:522/2008-09

ವಿಷಯ-Providing utility cable ducts & chambers for BESCOM & other utility cables in Hosur Road LHS from Ayyappa temple to CSB junction in Bangaloreರ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಪ್ರಸ್ತಾವನೆ:

Providing utility cable ducts & chambers for BESCOM & other utility cables in Hosur Road LHS from Ayyappa temple to CSB junction in Bangaloreರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರೂ.68.33 ಲಕ್ಷಗಳಿಗೆ ಕಾರ್ಯಪಾಲಕ ಅಭಿಯಂತರರು(ರಸ್ತೆ ಅಗಲೀಕರಣ)ರವರು ಅಂದಾಜುಪಟ್ಟಿಯ ಪ್ರಕ್ರಿಯೆಯನ್ನು ಕೈಗೊಂಡಿದ್ದು ಸದರಿ ಟೆಂಡರಿನಲ್ಲಿ ಇಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದರು. ಅವರುಗಳು 1) ಶ್ರೀ. ಬಿ.ಎಮ್.ಮೋಹನ್‌ಕುಮಾರ್, 2) ಶ್ರೀ.ಜಿ.ಜಯರಾಮ್ ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್ ಗಳನ್ನು ದಿನಾಂಕ:16/07/08ರಂದು ತೆರೆಯಲಾಗಿರುತ್ತದೆ. ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿದೆ.

1)ಶ್ರೀ.ಬಿ.ಎಮ್.ಮೋಹನ್‌ಕುಮಾರ್,ರವರು ಒಟ್ಟು ರೂ.1,02,31,972.00 ನಮೂದಿಸಿದ್ದು, ಇದನ್ನು ಅನುಮೋದಿತ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.49.47ರಷ್ಟು ಹೆಚ್ಚಿದ್ದು ಹಾಗೂ 08-09ನೇ ಸಾಲಿನ ಹೆಚ್ಚುವರಿ ಸಿಮೆಂಟ್/ಉಕ್ಕು/ ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.49.42ರಷ್ಟು ಹೆಚ್ಚಾಗಿರುತ್ತದೆ.

2)ಶ್ರೀ.ಜಿ.ಜಯರಾಮ್ ರವರು ಒಟ್ಟು ರೂ.95,44,726.00 ನಮೂದಿಸಿದ್ದು, ಇದನ್ನು ಅನುಮೋದಿತ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.39.69ರಷ್ಟು ಹೆಚ್ಚಿದ್ದು ಹಾಗೂ 08-09ನೇ ಸಾಲಿನ ಹೆಚ್ಚುವರಿ ಸಿಮೆಂಟ್/ಉಕ್ಕು/ ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.39.38ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ.ಜಿ.ಜಯರಾಮ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಇದನ್ನು ಅನುಮೋದಿತ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.39.69 ರಷ್ಟು ಹೆಚ್ಚಿದ್ದು ಹಾಗೂ 08-09ನೇ ಸಾಲಿನ ಹೆಚ್ಚುವರಿ ಸಿಮೆಂಟ್/ಉಕ್ಕು/ ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.39.38ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುತ್ತಾರೆ. ತದರನ್ವಯ ದಿನಾಂಕ:22/07/2008ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಶೇ.39.38 ರಿಂದ ಶೇ.19.85 ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ.ಜಿ.ಜಯರಾಮ್, ರವರ ಸಂಧಾನದ ನಂತರದ ಟೆಂಡರ್ ಮೊತ್ತವು ರೂ.82,07,065.00 ಗಳಾಗಿದ್ದು,(ರೂ.ಎಂಬತ್ತೆರಡು ಲಕ್ಷದ ಏಳು ಸಾವಿರದ ಅರವತ್ತೈದು ಮಾತ್ರ). ಇದನ್ನು ಅನುಮೋದಿತ ಅಂದಾಜು ಪಟ್ಟಿಯ ದರಗಳ ಮೊತ್ತವಾದ ರೂ.68,32,839.00 ಗಳಿಗೆ ಹೋಲಿಸಿದಾಗ ಶೇ.20.11ರಷ್ಟು ಹೆಚ್ಚಿದ್ದು ಹಾಗೂ 08-09ನೇ ಸಾಲಿನ ಹೆಚ್ಚುವರಿ ಸಿಮೆಂಟ್/ಉಕ್ಕು/ ಬಿಟುಮಿನ್ ದರಗಳ ಮೊತ್ತವಾದ ರೂ.68,47,781.00 ಗಳಿಗೆ ಹೋಲಿಸಿದಾಗ ಶೇ.19.85% ರಷ್ಟು ಹೆಚ್ಚಿಗೆ ಇದ್ದು ಸದರಿ ಟೆಂಡರ್‌ನ ಅನುಮೋದನೆಗಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/09/2008ರ ನಡವಳಿಗಳು

**ವಿಷಯದ ಸಂಖ್ಯೆ:523/2008-09**

ವಿಷಯ:-ಬಳ್ಳಾರಿ ರಸ್ತೆಯ ಸರಪಳಿ 5.50 ಕಿ.ಮೀ.ನಿಂದ ಸರಪಳಿ 7.33 ಕಿ.ಮೀ.ವರೆಗೆ ಬ್ಯಾರಿಕೇಡಿಂಗ್ ನ್ನು ಅಳವಡಿಸುವ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ಬಳ್ಳಾರಿ ರಸ್ತೆಯ ಸರಪಳಿ 5.50 ಕಿ.ಮೀ.ನಿಂದ ಸರಪಳಿ 7.33 ಕಿ.ಮೀ.ವರೆಗೆ ಬ್ಯಾರಿಕೇಡಿಂಗ್ ನ್ನು ಅಳವಡಿಸುವ ಕಾಮಗಾರಿಗೆ ದಿನಾಂಕ:27/2/08ರಂದು ಕಾರ್ಯಪಾಲಕ ಅಭಿಯಂತರರು(ರಸ್ತೆ ಡಾಂಬರೀಕರಣ)ರವರು ಟೆಂಡರ್ ಕರೆದಿರುತ್ತಾರೆ. ಈ ಕಾಮಗಾರಿಗೆ ದಿನಾಂಕ:10/03/2008ರಂದು ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿದ್ದು, ದಿನಾಂಕ:15-03-2008ರಂದು ತಾಂತ್ರಿಕ ಬಿಡ್ ಗಳನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರುಗಳಾದ (1)ಶ್ರೀ. ಮುನಿರತ್ನ (2)ಶ್ರೀ.ಕೆ.ದಾಮೋದರ್ ರವರುಗಳು ಪಾಲುಗೊಂಡಿದ್ದು, ಅವರು ಟೆಂಡರ್ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಗುತ್ತಿಗೆದಾರರು ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಅರ್ಹರಾಗಿದ್ದು, ಇವರುಗಳ ಅರ್ಥಿಕ ಬಿಡ್ ಗಳನ್ನು ದಿನಾಂಕ:03/06/2008ರಂದು ತೆರೆಯಲಾಗಿರುತ್ತದೆ. ಈ ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಈ ಕೆಳಕಂಡಂತಿದೆ.

(1)ಶ್ರೀ. ಮುನಿರತ್ನ, ರವರು ಒಟ್ಟು ರೂ.1,10,38,640.27 ನಮೂದಿಸಿದ್ದು, ಇದು 07-08ನೇ ಸಾಲಿನ ದರ ಪಟ್ಟಿಗೆ ಶೇ.29.87%ರಷ್ಟು ಹೆಚ್ಚಾಗಿರುತ್ತದೆ.

(2)ಶ್ರೀ. ಕೆ.ದಾಮೋದರ್ ಒಟ್ಟು ರೂ.1,15,26,492.00 ನಮೂದಿಸಿದ್ದು, ಇದು 07-08ನೇ ಸಾಲಿನ ದರ ಪಟ್ಟಿಗೆ ಶೇ.35.61%ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ.ಮುನಿರತ್ನ, ರವರು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಇದನ್ನು 2007-08ನೇ ಸಾಲಿನ ದರದಂತೆ ಶೇ.29.87%ರಷ್ಟು ಹೆಚ್ಚಾಗಿ ದರವನ್ನು ನಮೂದಿಸಿರುತ್ತಾರೆ. ತದನನ್ವಯ ದಿನಾಂಕ:10/06/2008 ಮತ್ತು 19/06/2008 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಶೇ.24.00%ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ. ಮುನಿರತ್ನ ರವರ ಗುತ್ತಿಗೆಯ ಮೊತ್ತ ರೂ.1,05,39,554.57ಗಳಾಗಿದ್ದು, ಇದನ್ನು 2007-08ರ ಸಾಲಿನ ದರ ಸೂಚಿಗೆ ಹೋಲಿಸಿದಾಗ ಶೇ.24.00% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆಗಾಗಿ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12/09/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:12/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 24/09/2008ರ ನಡವಳಿಗಳು**

ವಿಷಯ: ಸಂಖ್ಯೆ:527/2008-09

Construction of Culverts ,Providing metalling and asphalting to the road from Harinagara to Chunchagatta Circle via Srinidhi layout (ch.0.00 to 0.80 KM) ರ ಕಾಮಗಾರಿ ಬಗ್ಗೆ

ಪ್ರಸ್ತಾವನೆ:

Construction of Culverts ,Providing metalling and asphalting to the road from Harinagara to Chunchagatta Circle via Srinidhi layout (Ch.0.00 to 0.80 KM)ರ ಕಾಮಗಾರಿಗೆ 2008-09ನೇ ಸಾಲಿನ ದರಪಟ್ಟಿಯಂತೆ ರೂ.40.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ್ದು, ಸದರಿ ಕಾಮಗಾರಿಯ ವೆಚ್ಚವನ್ನು 2008-09ನೇ ಸಾಲಿನ ಆಯವ್ಯಯದ Zonal Engineering - Public works (Zonal), Zone works ಲೆಕ್ಕಶೀರ್ಷಿಕೆಯಲ್ಲಿ ಭರಿಸಲು ಉದ್ದೇಶಿಸಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತಾರೆ. ಹಾಗೂ ಸದರಿ ಕಾಮಗಾರಿಯು ಪುಟ್ಟೇನಹಳ್ಳಿ ವಿಭಾಗದ ಕ್ರಿಯಾ ಯೋಜನೆಯಲ್ಲಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.40.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09/09/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:09/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್‌ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/09/2008ರ ನಡವಳಿಗಳು**

**ವಿಷಯ: ಸಂಖ್ಯೆ:528/2008–09**

Construction of Culverts ,Providing metalling and asphalting to the road from Kothanur village to BDA road (Ch.0.00 to 0.75 KM) ರ ಕಾಮಗಾರಿ ಬಗ್ಗೆ

**ಪ್ರಸ್ತಾವನೆ:**

Construction of Culverts ,Providing metalling and asphalting to the road from Kothanur village to BDA road (Ch.0.00 to 0.75 KM)ರ ಕಾಮಗಾರಿಗೆ 2008–09ನೇ ಸಾಲಿನ ದರಪಟ್ಟಿಯಂತೆ ರೂ.50.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ್ದು, ಸದರಿ ವೆಚ್ಚವನ್ನು 2008–09ನೇ ಸಾಲಿನ ಆಯವ್ಯಯದ Zonal Engineering – Public works (Zonal), Zone works ಲೆಕ್ಕಶೀರ್ಷಿಕೆಯಲ್ಲಿ ಭರಿಸಲು ಉದ್ದೇಶಿಸಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತಾರೆ. ಹಾಗೂ ಸದರಿ ಕಾಮಗಾರಿಯು ಪುಟ್ಟೇನಹಳ್ಳಿ ವಿಭಾಗದ ಕ್ರಿಯಾ ಯೋಜನೆಯಲ್ಲಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.50.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್‌ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/09/2008ರ ನಡವಳಿಗಳು</u>**

ವಿಷಯ: ಸಂಖ್ಯೆ:529/2008-09

Providing drain, Culvert and footpath paving, kerb stones to the road from outer ring road to Shahi garments at Ambalipuraರ ಕಾಮಗಾರಿ ಬಗ್ಗೆ

ಪ್ರಸ್ತಾವನೆ:

Providing drain, Culvert and footpath paving, kerb stones to the road from outer ring road to Shahi garments at Ambalipuraರ ಕಾಮಗಾರಿಗೆ 2007-08ನೇ ಸಾಲಿನ ದರಪಟ್ಟಿಯಂತೆ ರೂ.80.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ್ದು, ಸದರಿ ವೆಚ್ಚವನ್ನು 2008-09ನೇ ಸಾಲಿನ ಆಯವ್ಯಯದ Zonal Engineering - Public works (Zonal), Zone works ಲೆಕ್ಕಶೀರ್ಷಿಕೆಯಲ್ಲಿ ಭರಿಸಲು ಉದ್ದೇಶಿಸಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತಾರೆ. ಹಾಗೂ ಸದರಿ ಕಾಮಗಾರಿಯು ಬೊಮ್ಮನಹಳ್ಳಿ ವಿಭಾಗದ ಕ್ರಿಯಾ ಯೋಜನೆಯಲ್ಲಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.80.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿ.

**<u>ತೀರ್ಮಾನ:</u>** ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/09/2008ರ ನಡವಳಿಗಳು

ವಿಷಯ: ಸಂಖ್ಯೆ:534/2008-09

Providing 4 culverts, Metalling the remaining 2 cross roads and asphalting to roads of Green glen layout in Bellanduru villageರ ಕಾಮಗಾರಿ ಬಗ್ಗೆ

ಪ್ರಸ್ತಾವನೆ:

Providing 4 culverts, Metalling the remaining 2 cross roads and asphalting to roads of Green glen layout in Bellanduru villageರ ಕಾಮಗಾರಿಗೆ 2007-08ನೇ ಸಾಲಿನ ದರಪಟ್ಟಿಯಂತೆ ರೂ.60.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ್ದು, ಸದರಿ ವೆಚ್ಚವನ್ನು 2008-09ನೇ ಸಾಲಿನ ಆಯವ್ಯಯದ Zonal Engineering - Public works (Zonal), Zone works ಲೆಕ್ಕಶೀರ್ಷಿಕೆಯಲ್ಲಿ ಭರಿಸಲು ಉದ್ದೇಶಿಸಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತಾರೆ. ಹಾಗೂ ಸದರಿ ಕಾಮಗಾರಿಯು ಬೊಮ್ಮನಹಳ್ಳಿ ವಿಭಾಗದ ಕ್ರಿಯಾ ಯೋಜನೆಯಲ್ಲಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.60.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09/09/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:09/09/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.